ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ. ಎಸ್.ನಾಗರಾಜ್ (ಸಂದೇಶ್ ನಾಗರಾಜ್) ಸ್ಥಳೀಯ ಸಂಸ್ಥೆಗಳ ಕ್ಷೇತ್ರ),
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1007 (1113)
ಉತ್ತರಿಸಬೇಕಾದ ದಿನಾಂಕ	21.09.2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರಕ್ಕೆ ಮಾಲಿಂಗಿಯಿಂದ ಕಾವೇರಿ ನೀರನ್ನು ಸರಬರಾಜು ಮಾಡುವ ಎರಡನೇ ಹಂತದ ಯೋಜನೆಗೆ ಮಂಜೂರಾತಿ ದೊರಕಿದೆಯೇ? ಯೋಜನೆ ಯಾವ ಹಂತದಲ್ಲಿದೆ; (ವಿವರಗಳನ್ನು ಒದಗಿಸುವುದು)	ಮಾಲಿಂಗಿ ಮೂಲದಿಂದ ಚಾಮರಾಜ ನಗರಕ್ಕೆ ಕಾವೇರಿ ನೀರನ್ನು ಸರಬರಾಜು ಮಾಡುವ ಕುರಿತು ರೂ.276.00 ಕೋಟಿಗಳ ಅಂದಾಜನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಸಿದ್ಧಪಡಿಸಲಾಗುತ್ತಿದೆ.
ಆ)	ಚಾಮರಾಜನಗರದಲ್ಲಿ ಎಲ್ಲ ಬಡಾವಣೆಯ ಮನೆಗಳಿಗೆ ನೂತನ ಒಳಚರಂಡಿ ಸಂಪರ್ಕ ಕಲ್ಪಿಸಲಾಗಿದೆಯೇ ?	ಇಲ್ಲ, ಚಾಮರಾಜನಗರ ಪಟ್ಟಣದಲ್ಲಿ ಸುಮಾರು 16191 ಮನೆಗಳಿದ್ದು, ಮೂರು ಮನೆಗಳಿಗೆ 01 ರಿಸೀವಿಂಗ್ ಛೇಂಬರ್‌ನಂತೆ 5397 ರಿಸೀವಿಂಗ್ ಛೇಂಬರ್‌ಗಳು ಅವಶ್ಯಕತೆ ಇರುತ್ತದೆ. ಇದರಲ್ಲಿ 9000 ಮನೆಗಳಿಗೆ ರಿಸೀವಿಂಗ್ ಛೇಂಬರ್‌ಗಳಿದ್ದು ಕಡೆಗಳಲ್ಲಿ ಮನೆ ಮಾಲೀಕರೇ ಒಳಚರಂಡಿ ಸಂಪರ್ಕ ಕಲ್ಪಿಸಿಕೊಂಡಿರುತ್ತಾರೆ ಹಾಗೂ ರಿಸೀವಿಂಗ್ ಛೇಂಬರ್‌ಗಳು ಇರುವ ಕಡೆಗಳಲ್ಲಿ 645 ಮನೆಯ ಮಾಲೀಕರು ಒಳಚರಂಡಿ ಸಂಪರ್ಕವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಸುಮಾರು 6546 ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಕಾರ್ಯವನ್ನು ಮಾಲೀಕರುಗಳು ಅವರವರ ಸ್ವಂತ ಖರ್ಚಿನಲ್ಲಿಯೇ ಮಾಡಿಕೊಳ್ಳಬೇಕಾಗಿರುವುದರಿಂದ ಮಾಲೀಕರು ಒಳಚರಂಡಿ ಸಂಪರ್ಕ ಪಡೆದುಕೊಳ್ಳುವುದು ವಿಳಂಬವಾಗಿರುತ್ತದೆ ಎಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರು ವರದಿ ಮಾಡಿರುತ್ತಾರೆ.

ಸಂಖ್ಯೆ : ನಅಇ 159 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು